ದಿನದ ಪ್ರವಾಸ ಮಾಡಬಹುದು, ಏನೇನು ನೋಡಬಹುದು ಎಂಬ ಪಟ್ಟಿಯನ್ನು ನಾವೇ ಸಿದ್ಧಪಡಿಸಬಹುದು. ವಿದೇಶದಲ್ಲಿರುವ ಭಾರತೀಯ ಹೋಟೆಲ್‌ಗಳ ಬಗ್ಗೆ, ಅಲ್ಲಿನ ಆಹಾರ ಪದ್ಧತಿಯ ಬಗ್ಗೆ ಮಾಹಿತಿ ಸಂಗ್ರಹಿಸುವುದು ಕೂಡ ಅಗತ್ಯ. ಭಾರತೀಯ ಎಂಬೆಸಿಯ (ರಾಯಭಾರ ಕಚೇರಿಯ) ಸಂಪರ್ಕ ಅಥವಾ ವಿಳಾಸವನ್ನು ಇಟ್ಟುಕೊಳ್ಳಬೇಕು. ಅಕಸ್ಮಾತ್ ಏನಾದರೂ ತುರ್ತು ಅಥವಾ ತೀವ್ರ ಸಂಕಷ್ಟ ಪರಿಸ್ಥಿತಿ ಎದುರಾದರೆ ಅವರಿಂದ ನೆರವು ಪಡೆಯಬಹುದು.

## ಹವಾಮಾನ

ವಿದೇಶಕ್ಕೆ ನಾವು ಹೋಗುವ ಸಮಯದಲ್ಲಿ ಅಲ್ಲಿನ ಹವಾಮಾನದ ಬಗ್ಗೆ ನಮ್ಮಲ್ಲಿ ಮಾಹಿತಿ ಇರಬೇಕು. ಚಳಿಯಿದ್ದರೆ ಅದಕ್ಕೆ ತಕ್ಕಂತೆ ಉಡುಪುಗಳನ್ನು ಇಟ್ಟುಕೊಳ್ಳಬೇಕು. ಅಲ್ಲಿನ ರಾಜಕೀಯ ಪರಿಸ್ಥಿತಿಯ ಬಗ್ಗೆಯೂ ಕೊಂಚ ತಿಳಿವಳಿಕೆಯಿದ್ದರೆ ಒಳ್ಳೆಯದು. ಸ್ವತಂತ್ರವಾಗಿ ಹೋಗುವಾಗ ಅಲ್ಲಿ ಶಾಂತಿ ಕದಡಿದ್ದರೆ ಅಪಾಯಕ್ಕೀಡಾಗುವ ಸಂಭವ ಇರುತ್ತದೆ. ಸ್ಥಳದ ಬಗ್ಗೆ ಸಾಕಷ್ಟು ಮಾಹಿತಿಯಿದ್ದರೆ ದಾರಿತಪ್ಪುವ ಸಮಸ್ಯೆ ಇರುವುದಿಲ್ಲ. ಕೆಲವು ತಾಣಗಳಿಗೆ ವಾರದ ಒಂದು ದಿನ ರಜೆ ಇರುತ್ತದೆ. ವೀಕ್ಷಣೆಗೆ ಸಮಯ ನಿಗದಿಪಡಿಸಲಾಗಿರುತ್ತದೆ. ಅದರ ಕುರಿತು ತಿಳಿದಿರಬೇಕು.

## ವಿಮಾನದ ಸಮಯ

ಸಾಮಾನ್ಯವಾಗಿ ಭಾರತದಿಂದ ವಿದೇಶಕ್ಕೆ ಹಾರುವ ವಿಮಾನಗಳು ರಾತ್ರಿ ವೇಳೆಯಲ್ಲಿರುತ್ತವೆ. ನಾವು ವಿಮಾನ ನಿಲ್ದಾಣದಲ್ಲಿ, ವಿಮಾನ ಹೊರಡುವ ಸಮಯಕ್ಕಿಂತ ಮೂರು ಗಂಟೆ ಮುಂಚಿತವಾಗಿರಬೇಕು. ನಾವು ತಲುಪುವ ದೇಶದ ಸಮಯಕ್ಕೂ ನಮ್ಮ ದೇಶದ ಸಮಯಕ್ಕೂ ವ್ಯತ್ಯಾಸವನ್ನು ತಿಳಿದುಕೊಳ್ಳಬೇಕು. ಕೆಲವು ಬಾರಿ ಒಂದು ದೇಶಕ್ಕೆ ಹೋಗಲು ಮತ್ತೊಂದು ದೇಶದ ವಿಮಾನ ನಿಲ್ದಾಣದಲ್ಲಿ ಇಳಿದು ಮತ್ತೊಂದು ವಿಮಾನವನ್ನು ಹತ್ತಬೇಕಾಗುತ್ತದೆ. ಹಾಗಿದ್ದಾಗ ಏನೇನು ಎಚ್ಚರ ವಹಿಸಬೇಕು ಎಂಬುದರ ಬಗ್ಗೆ ತಿಳಿದುಕೊಳ್ಳಬೇಕು.

## ಪಾಸ್‌ಪೋರ್ಟ್ – ವೀಸಾ ಸಡಿಲಿಕೆ

ನಮ್ಮ ನೆರೆಯ ದೇಶಗಳಾದ ಭೂತಾನ್ ಮತ್ತು ನೇಪಾಳಕ್ಕೆ ನಾವು ಪಾಸ್ ಪೋರ್ಟ್ ಇಲ್ಲದೆಯೂ ಭೇಟಿ ನೀಡಬಹುದು. ಆದರೆ ಮತದಾನದ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತೆಗೆದುಕೊಂಡು ಹೋಗಬೇಕು. ನಮ್ಮ ಆಧಾರ್ ಕಾರ್ಡ್ ಅನ್ನು ಅವರು ಪರಿಗಣಿಸುವುದಿಲ್ಲ.

ಮುಂಚಿತವಾಗಿಯೇ ಯಾವುದೇ ವೀಸಾ ಅರ್ಜಿ ಪ್ರಕ್ರಿಯೆಗೆ ಒಳಪಡುವ ಅಗತ್ಯವಿಲ್ಲದೇ ವಿವಿಧ ದೇಶಗಳಿಗೆ ಭೇಟಿ ನೀಡಲು ನಮಗೆ ಈಗ ಅವಕಾಶವಿದೆ. ಭಾರತೀಯರಿಗೆ ಕೆಲವು ದೇಶಗಳು ಅವರ ದೇಶವನ್ನು ಪ್ರವೇಶಿಸಿದಾಗ ವಿಮಾನನಿಲ್ದಾಣದಲ್ಲಿ ವೀಸಾ ನೀಡಿ ಸ್ವಾಗತಿಸುತ್ತವೆ. ಭೂತಾನ್, ಕಾಂಬೋಡಿಯಾ, ಇಂಡೋನೇಷ್ಯಾ, ಕೀನ್ಯ, ಜೋರ್ಡಾನ್, ಲಾವೋಸ್, ಮಾಲ್ದೀವ್ಸ್, ಮಲೇಶಿಯಾ, ನೇಪಾಳ, ಮೊರಿಷಿಯಸ್, ಥಾಯ್ಲೆಂಡ್, ವಿಯೆಟ್ನಾಮ್ ಮುಂತಾದ ದೇಶಗಳಿಗೆ ಹೋದ ಮೇಲೆ ವೀಸಾ ಪಡೆಯುವ ಅವಕಾಶ ನಮಗಿದೆ.

## ಲಗೇಜ್ ಎಷ್ಟಿರಬೇಕು?

ನಾವು ತೆಗೆದುಕೊಂಡು ಹೋಗುವ ಸಾಮಾನುಗಳ ಸಂಖ್ಯೆ ಆದಷ್ಟೂ ಕಡಿಮೆಯಿರಲಿ. ಭಾರ ಕಡಿಮೆ ಮಾಡಲು ಬೇಕಿರುವುದನ್ನಷ್ಟೇ ಜೊತೆಗೆ ಒಯ್ಯಿರಿ. ಬಿಸ್ಕತ್ ಮುಂತಾದ ಕೆಡದ ಆಹಾರ ಪದಾರ್ಥ ಮತ್ತು ನೀರಿನ ಪುಟ್ಟ ಬಾಟಲ್ ನಮ್ಮೊಂದಿಗಿರಲಿ. ವಿಮಾನ ನಿಲ್ದಾಣದಲ್ಲಿ ಬೆಲೆ ಹೆಚ್ಚಿರುವುದರಿಂದ ನಮ್ಮೊಂದಿಗೆ ಕೆಲವು ತಿನಿಸಿದ್ದರೆ ಹಣ ಉಳಿಸಬಹುದು.

## ಕರೆನ್ಸಿ

ನಾವು ಹೋಗುವ ದೇಶದ ಹಣವನ್ನು ನಮ್ಮ ಖರ್ಚಿನ ಅಗತ್ಯಕ್ಕನುಗುಣವಾಗಿ ಹೊರಡುವ ಮುನ್ನವೇ ತೆಗೆದಿರಿಸಿಕೊಳ್ಳಬೇಕು. ಈಗ ಕರೆನ್ಸಿ ಕಾರ್ಡ್ ಕೂಡ ಸಿಗುತ್ತದೆ. ಅದು 'ಡೆಬಿಟ್ ಕಾರ್ಡ್' ರೀತಿ ಕೆಲಸ ಮಾಡುತ್ತದೆ. ಅಕಸ್ಮಾತ್ ಕಳೆದುಹೋದರೆ, ಅದನ್ನು ಬೇರೆಯವರು ಬಳಸದಂತೆ ತಕ್ಷಣ ಲಾಕ್ ಮಾಡಿಸಬಹುದು. ವಿದೇಶದಲ್ಲಿ ಮೊಬೈಲ್‌ಗೆ

